**ಕರ್ನಾಟಕ ಸರ್ಕಾರ**

**(ಪಿ.ಆರ್.ಪಿ.67)**

**ಹೇಳಿಕೆ ಹಾಳೆ**

**(ಆರ್.ಪಿ.ಸಂಖ್ಯೆ 57)**

**ನಮೂನೆ ಸಂಖ್ಯೆ 4**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 103/2015**

**ಫ್ರಾಸಾ- 8 ಚಾಸಾ- 20**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಸುಹೇಲ್ ಅಹಮದ್ |
| ತಂದೆಯ ಹೆಸರುಃ | : | ಮೊಹಮದ್ ಪೀರಾನ್ ಸಾಬ್ |
| ವಯಸ್ಸುಃ | : | 44 ವರ್ಷ |
| ಉದ್ಯೋಗಃ | : | ಫರ್ನಿಚರ್ ಅಂಗಡಿ ವ್ಯಾಪಾರ |
| ವಾಸ | : | ಹಾಸನ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 05-07-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ಹಾಸನ ಸಿಟಿ ಪಾಯಿಂಟ್ ಕಾಂಪ್ಲೆಕ್ಸ್ ನಲ್ಲಿರುವ ಫರ್ನಿಚರ್ ಶಾಪಿ ಎಂಬ ಹೆಸರಿನ ಫರ್ನಿಚರ್ ಅಂಗಡಿಯನ್ನು ನನ್ನ ತಂದೆ ಮಹಮದ್ ಪಿರಾನ್ ಎಂಬುವವರು 25-30 ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದರು. ಕಳೆದ 10 ವರ್ಷಗಳಿಂದ ನಾನು ನನ್ನ ತಂದೆಯ ಜೊತೆ ಆ ಅಂಗಡಿಯನ್ನು ನಡೆಸಿಕೊಂಡು ಬರುತ್ತಿದ್ದೇನೆ.

2.2013ರಲ್ಲಿ ಹಾಸನ ಲೋಕಾಯುಕ್ತ ಪೊಲೀಸರು ಮಧು ಮತ್ತು ಚೈತ್ರ ಎಂಬುವವರಿಗೆ ನಮ್ಮ ಅಂಗಡಿಯಿಂದ ಪೀಠೋಪಕರಣಗಳನ್ನು ಸರಬರಾಜು ಮಾಡಿರುವ ಬಗ್ಗೆ ಮಾಹಿತಿಯನ್ನು ನೀಡಬೇಕೆಂದು ಲಿಖಿತ ಮನವಿ ಸಲ್ಲಿಸಿದ್ದರು. ಆ ಪತ್ರದೊಂದಿಗೆ

ಪೊಲೀಸರು ಮಧು ಮತ್ತು ಚೈತ್ರ ಇವರ ಹೆಸರಿನಲ್ಲಿದ್ದ 2 ಇನ್ವಾಯ್ಸ್ ಪ್ರತಿಯನ್ನು ಕೊಟ್ಟಿದ್ದರು. ಅದನ್ನು ಪರಿಶೀಲಿಸಿದಾಗ ಅದು ನಮ್ಮ ಅಂಗಡಿಯಿಂದ ಕೊಡಲ್ಪಟ್ಟ ಇನ್ವಾಯ್ಸು ಆಗಿತ್ತು. ಆ ಇನ್ವಾಯ್ಸ್ ನಲ್ಲಿ ಕಾಣಿಸಿರುವ ಫರ್ನಿಚರ್ ಗಳನ್ನು ನಮ್ಮ ಫರ್ನಿಚರ್ ಅಂಗಡಿಯಿಂದ ಖರೀದಿಸಿರುವುದೆಂದು ದೃಢೀಕರಿಸಿ ಪತ್ರವನ್ನು ನೀಡಿರುತ್ತೇನೆ. ಆ ಪತ್ರವನ್ನು ಈಗ ನೋಡುತ್ತಿದ್ದು ನಿಪಿ-60 ಎಂದು ಸಾಕ್ಷಿಯು ಗುರುತಿಸಿದ ರುಜುವನ್ನು ನಿಪಿ-60(ಎ) ಎಂದು ಗುರುತಿಸಲಾಯಿತು. ಪೊಲೀಸರು ನನಗೆ ತೋರಿಸಿದ ಶೋಫಾರಂ ಇನ್ವಾಯ್ಸ್ ಗಳನ್ನು ಈಗ ನೋಡುತ್ತಿದ್ದು ಅದನ್ನು ಅದನ್ನು ನಿಪಿ-61 ಮತ್ತು 62 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ** ಶ್ರೀ ಡಿ ಎಂ ಪಿ **ವಕೀಲರಿಂದಃ**

ಯಾರು ನಮ್ಮ ಅಂಗಡಿಗೆ ಬಂದು ಹಣ ಕೊಟ್ಟು ಖರೀದಿ ಮಾಡುತ್ತಾರೋ ಅವರ ಹೆಸರಿಗೇ ನಾವು ಬಿಲ್ ನೀಡುವುದು ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**